# ರಾಜತಾಂತ್ರಿಕ ಸಂಬಂಧ (ವಿಯೆನ್ನಾ ಒಡಂಬಡಿಕೆ) ಅಧಿನಿಯಮ, 1972

(1972ರ ಅಧಿನಿಯಮ ಸಂಖ್ಯೆ 43)

**[02-11-2004 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 30 ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 13 ರಿಂದ 21 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**


1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ರಾಜತಾಂತ್ರಿಕ ಸಂಬಂಧಗಳ ಮೇಲಣ ವಿಯೆನ್ನಾ ಒಡಂಬಡಿಕೆಯ ಅನ್ವಯನ
3. ಅಂತಾರಾಷ್ಟ್ರೀಯ ಒಪ್ಪಂದಕ್ಕೆ ಅನುಸಾರವಾಗಿ ರಾಜತಾಂತ್ರಿಕ ನಿಯೋಗಗಳಿಗೆ ಮತ್ತು ಅವುಗಳ ಸದ್ಯರಿಗೆ ಕೆಲವು ವಿಶೇಷಾಧಿಕಾರಗಳ ಮತ್ತು ವಿಶೇಷ ರಕ್ಷಣೆಯ ಅನ್ವಯ
4. ವಿಶೇಷಾಧಿಕಾರಗಳ ಮತ್ತು ವಿಶೇಷ ರಕ್ಷಣೆಗಳ ಮೇಲೆ ನಿರ್ಬಂಧಗಳು
5. ಬಿಟ್ಟುಬಿಡುವಿಕೆ
6. ಸೀಮಾಸುಂಕ ಇತ್ಯಾದಿಗಳ ಮೇಲೆ ಇರುವ ಕೆಲವು ವಿನಾಯಿತಿಗಳ ಮೇಲೆ ನಿರ್ಬಂಧಗಳು
7. ಭಾರತದ ನಾಗರಿಕರ ವಿಶೇಷ ಅಧಿಕಾರಗಳು ಮತ್ತು ವಿಶೇಷ ರಕ್ಷಣೆಗಳು
8. ರಾಜತಾಂತ್ರಿಕ ಆವರಣಗಳ ಒಳಗೆ ಪ್ರವೇಶಿಸುವುದರ ಮೇಲೆ ನಿರ್ಬಂಧಗಳು
9. ಸಾಕ್ಷ್ಯ
10. ನಿಯಮ ರಚನಾಧಿಕಾರ
11. ಈ ಅಧಿನಿಯಮದ ಮೇರೆಗೆ ಹೊರಡಿಸಿದ ಅಧಿಸೂಚನೆಗಳನ್ನು ಮತ್ತು ರಚಿಸಿದ ನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು

ಅನುಸೂಚಿ

# ರಾಜತಾಂತ್ರಿಕ ಸಂಬಂಧ (ವಿಯೆನ್ನಾ ಒಡಂಬಡಿಕೆ) ಅಧಿನಿಯಮ, 1972

**(1972ರ ಅಧಿನಿಯಮ ಸಂಖ್ಯೆ 43)**

[29ನೇ ಆಗಸ್ಟ್, 1972]

1961ರ ರಾಜತಾಂತ್ರಿಕ ಸಂಬಂಧಗಳ ಮೇಲಣ ವಿಯೆನ್ನಾ ಒಡಂಬಡಿಕೆಯನ್ನು ಜಾರಿಗೆ ತರುವ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೂರನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.-** (1) ಈ ಅಧಿನಿಯಮವನ್ನು ರಾಜತಾಂತ್ರಿಕ ಸಂಬಂಧ (ವಿಯೆನ್ನಾ ಒಡಂಬಡಿಕೆ) ಅಧಿನಿಯಮ, 1972 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

**2. ರಾಜತಾಂತ್ರಿಕ ಸಂಬಂಧಗಳ ಮೇಲಣ ವಿಯೆನ್ನಾ ಒಡಂಬಡಿಕೆಯ ಅನ್ವಯನ.-** (1) ಯಾವುದೇ ಇತರ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾದುದು ಏನೇ ಇದ್ದರೂ, ರಾಜತಾಂತ್ರಿಕ ವ್ಯವಹಾರ ಮತ್ತು ವಿಶೇಷ ರಕ್ಷಣೆ ಕುರಿತ ಸಂಯುಕ್ತ ರಾಷ್ಟ್ರಗಳ ಸಮ್ಮೇಳನದಲ್ಲಿ 1961ರ ಏಪ್ರಿಲ್, 14 ರಂದು ಅಂಗೀಕರಿಸಲಾದ ಮತ್ತು ಈ ಅಧಿನಿಯಮದ ಅನುಸೂಚಿಯಲ್ಲಿ ನಿರೂಪಿಸಲಾದ ರಾಜತಾಂತ್ರಿಕ ಸಂಬಂಧಗಳ ವಿಯೆನ್ನಾ ಒಡಂಬಡಿಕೆಯ ಉಪಬಂಧಗಳು ಭಾರತದಲ್ಲಿ ಕಾನೂನು ಬಲವನ್ನು ಹೊಂದಿರತಕ್ಕದ್ದು.

(2) ಅನುಸೂಚಿಯಲ್ಲಿ ನಿರೂಪಿಸಿರುವ ಸದರಿ ಒಡಂಬಡಿಕೆಯ ಉಪಬಂಧಗಳಿಗೆ ಯುಕ್ತವಾಗಿ ಮಾಡಲಾದ ಮತ್ತು ಅಂಗೀಕರಿಸಲಾದ ಯಾವುವೇ ತಿದ್ದುಪಡಿಗಳಿಗನುಸಾರವಾಗಿ ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು.

**3. ಅಂತಾರಾಷ್ಟ್ರೀಯ ಒಪ್ಪಂದಕ್ಕೆ ಅನುಸಾರವಾಗಿ ರಾಜತಾಂತ್ರಿಕ ನಿಯೋಗಗಳಿಗೆ ಮತ್ತು ಅವುಗಳ ಸದಸ್ಯರಿಗೆ ಕೆಲವು ವಿಶೇಷಾಧಿಕಾರಗಳ ಮತ್ತು ವಿಶೇಷ ರಕ್ಷಣೆಯ ಅನ್ವಯನ.-** ರಾಜತಾಂತ್ರಿಕ ನಿಯೋಗವನ್ನು ಮತ್ತು ಅದರ ಸದಸ್ಯರುಗಳನ್ನು ಕಳುಹಿಸುವ ಯಾವ ರಾಷ್ಟ್ರವು ರಾಜತಾಂತ್ರಿಕ ಸಂಬಂಧಗಳ ಕುರಿತ ವಿಯೆನ್ನಾ ಒಡಂಬಡಿಕೆ, 1961ಕ್ಕೆ ಪಕ್ಷವಾಗಿಲ್ಲವೋ ಆ ರಾಷ್ಟ್ರಕ್ಕೆ ಅಥವಾ ಆ ಯಾವುದೇ ರಾಜತಾಂತ್ರಿಕ ನಿಯೋಗಕ್ಕೆ ಮತ್ತು ಅದರ ಸದಸ್ಯರುಗಳಿಗೆ ಅಥವಾ ಯಾವುದೇ ಇತರ ವಿಶೇಷ ನಿಯೋಗಕ್ಕೆ ಮತ್ತು ಅದರ ಸದಸ್ಯರುಗಳಿಗೆ ಅನುಸೂಚಿಯಲ್ಲಿ ನಿರೂಪಿಸಿರುವ ಉಪಬಂಧಗಳಲ್ಲಿ ಒಳಗೊಂಡಿರುವಂಥ ವಿಶೇಷಾಧಿಕಾರಗಳಿಗೆ ಮತ್ತು ವಿಶೇಷ ರಕ್ಷಣೆಗಳಿಗೆ ಸಮಾನವಾದಂಥ ವಿಶೇಷಾಧಿಕಾರಗಳನ್ನು ಮತ್ತು ವಿಶೇಷ ರಕ್ಷಣೆಗಳನ್ನು ಭಾರತದಲ್ಲಿ ಯಾವುದೇ ಒಪ್ಪಂದಕ್ಕೆ, ಒಡಂಬಡಿಕೆಗೆ ಅಥವಾ ಇತರ ಲಿಖಿತಗಳಿಗೆ ಅನುಸಾರವಾಗಿ ಕೊಡುವುದು ಅವಶ್ಯವಾಗಿರುವಲ್ಲಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅನುಸೂಚಿಯಲ್ಲಿ ನಿರೂಪಿಸಿದ ಉಪಬಂಧಗಳನ್ನು ಸದರಿ ಒಪ್ಪಂದವನ್ನು, ಒಡಂಬಡಿಕೆಯನ್ನು ಅಥವಾ ಇತರ ಲಿಖಿತವನ್ನು ಜಾರಿಗೆ ತರುವುದಕ್ಕಾಗಿ ತಾನು ಅವಶ್ಯಕವೆಂದು ಅಥವಾ ವಿಹಿತವೆಂದು

ಪರ್ಯಾಲೋಚಿಸಬಹುದಾದಂಥ, ಯಾವುವೇ ಮಾರ್ಪಾಟುಗಳಿಗೊಳಪಟ್ಟು, ರಾಜತಾಂತ್ರಿಕ ನಿಯೋಗಕ್ಕೆ ಮತ್ತು ಅದರ ಸದಸ್ಯರಿಗೆ ಅಥವಾ ಸಂದರ್ಭಾನುಸಾರ ಇತರ ವಿಶೇಷ ನಿಯೋಗಕ್ಕೆ ಮತ್ತು ಅದರ ಸದಸ್ಯರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದೆಂದು ಘೋಷಿಸಬಹುದು ಮತ್ತು ಆ ತರುವಾಯ ಸದರಿ ಉಪಬಂಧಗಳು ತದನುಸಾರವಾಗಿ ಅನ್ವಯವಾಗತಕ್ಕದ್ದು ಮತ್ತು ಯಾವುದೇ ಇತರ ಕಾನೂನಿನಲ್ಲಿ ಇದಕ್ಕೆ ತದ್ವಿರುದ್ಧವಾದುದು ಏನೇ ಇದ್ದರೂ, ಹಾಗೆ ಅನ್ವಯವಾದಾಗ ಭಾರತದಲ್ಲಿ ಅದು ಕಾನೂನು ಬಲವನ್ನು ಹೊಂದಿರತಕ್ಕದ್ದು.

**4. ವಿಶೇಷಾಧಿಕಾರಗಳ ಮತ್ತು ವಿಶೇಷ ರಕ್ಷಣೆಗಳ ಮೇಲೆ ನಿರ್ಬಂಧಗಳು.–** ರಾಜತಾಂತ್ರಿಕ ಸಂಬಂಧಗಳ ಕುರಿತ ವಿಯೆನ್ನಾ ಒಡಂಬಡಿಕೆ, 1961ಕ್ಕೆ ಪಕ್ಷವಾಗಿರುವ ರಾಷ್ಟ್ರವು, ಆ ಒಡಂಬಡಿಕೆಯ ಮೇರೆಗೆ ಉದ್ಭವಿಸುವ ತನ್ನ ಹೊಣೆಗಾರಿಕೆಗಳನ್ನು ಉಲ್ಲಂಘಿಸುತ್ತಿದೆಯೆಂದು ಅಥವಾ ರಾಜತಾಂತ್ರಿಕ ಸಂಬಂಧಗಳ ಕುರಿತ ವಿಯೆನ್ನಾ ಒಡಂಬಡಿಕೆ, 1961ಕ್ಕೆ ಪಕ್ಷವಾಗಿರುವ ಯಾವುದೇ ರಾಷ್ಟ್ರದ ರಾಜ್ಯಕ್ಷೇತ್ರದಲ್ಲಿ ಭಾರತೀಯ ನಿಯೋಗಕ್ಕೆ ಅಥವಾ ಅದರ ಸದಸ್ಯರಿಗೆ ನೀಡಿರುವ ವಿಶೇಷಾಧಿಕಾರಗಳು ಮತ್ತು ವಿಶೇಷ ರಕ್ಷಣೆಗಳು ಆ ರಾಷ್ಟ್ರದ ರಾಜತಾಂತ್ರಿಕ ನಿಯೋಗಕ್ಕೆ ಅಥವಾ ಅದರ ಸದಸ್ಯರಿಗೆ ಈ ಅಧಿನಿಯಮದ ಮೇರೆಗೆ ನೀಡಿರುವ ವಿಶೇಷಾಧಿಕಾರಗಳು ಮತ್ತು ವಿಶೇಷ ರಕ್ಷಣೆಗಳಿಗಿಂತ ಕಡಿಮೆಯಾಗಿವೆಯೆಂದು ಕೇಂದ್ರ ಸರ್ಕಾರಕ್ಕೆ ಕಂಡುಬಂದರೆ, ಕೇಂದ್ರ ಸರ್ಕಾರವು, ಈ ಅಧಿನಿಯಮದಲ್ಲಿ ಏನೇ ಇದ್ದರೂ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ರಾಷ್ಟ್ರದ ರಾಜತಾಂತ್ರಿಕ ನಿಯೋಗಕ್ಕೆ ಅಥವಾ ಅದರ ಸದಸ್ಯರಿಗೆ ಹಾಗೆ ನೀಡಲಾದಂಥ ವಿಶೇಷಾಧಿಕಾರಗಳನ್ನು ಮತ್ತು ವಿಶೇಷ ರಕ್ಷಣೆಗಳನ್ನು ತನಗೆ ಉಚಿತವೆಂದು ಕಂಡುಬರುವ ಹಾಗೆ ಅವರಿಂದ ಹಿಂತೆಗೆದುಕೊಳ್ಳಬಹುದು.

**5. ಬಿಟ್ಟುಬಿಡುವಿಕೆ.–** ಅನುಸೂಚಿಯಲ್ಲಿ ನಿರೂಪಿಸಲಾಗಿರುವ ಒಡಂಬಡಿಕೆಯ 32ನೇ ಅನುಚ್ಛೇದದ ಉದ್ದೇಶಕ್ಕಾಗಿ, ಯಾವುದೇ ರಾಷ್ಟ್ರದ ನಿಯೋಗದ ಮುಖ್ಯಸ್ಥನು ಅಥವಾ ತತ್ಕಾಲದಲ್ಲಿ ಅವನ ಪ್ರಕಾರ್ಯಗಳನ್ನು ನೆರವೇರಿಸುತ್ತಿರುವ ಯಾರೇ ವ್ಯಕ್ತಿಯು ವಿಶೇಷ ರಕ್ಷಣೆಯನ್ನು ಬಿಟ್ಟುಕೊಟ್ಟರೆ, ಅದನ್ನು ರಾಷ್ಟ್ರವು ಬಿಟ್ಟುಕೊಟ್ಟಿದೆಯೆಂದು ಭಾವಿಸತಕ್ಕದ್ದು.

**6. ಸೀಮಾಸುಂಕ ಇತ್ಯಾದಿಗಳ ಮೇಲೆ ಇರುವ ಕೆಲವು ವಿನಾಯಿತಿಗಳ ಮೇಲೆ ನಿರ್ಬಂಧಗಳು.–** ಅನುಸೂಚಿಯಲ್ಲಿ ನಿರೂಪಿಸಿರುವ ಒಡಂಬಡಿಕೆಯ 36ನೇ ಅನುಸೂಚಿಯಲ್ಲಿ ಇರುವುದ್ಯಾವುದೂ, ರಾಜತಾಂತ್ರಿಕ ನಿಯೋಗವು ಅಥವಾ ಅದರ ಸದಸ್ಯನು ಯಾವುದೇ ಸೀಮಾಸುಂಕವಿಲ್ಲದೆ ಸರಕುಗಳನ್ನು ಭಾರತಕ್ಕೆ ಆಮದು ಮಾಡಿಕೊಂಡು ತರುವಾಯ ಅವುಗಳನ್ನು ಯಾವುದೇ ನಿರ್ಬಂಧಗಳಿಲ್ಲದೆ ಮಾರಾಟ ಮಾಡಲು ಅವನನ್ನು ಹಕ್ಕುಳ್ಳವನನ್ನಾಗಿಸುತ್ತದೆಯೆಂದು ಅರ್ಥೈಸತಕ್ಕುದಲ್ಲ.

**7. ಭಾರತದ ನಾಗರಿಕರ ವಿಶೇಷ ಅಧಿಕಾರಗಳು ಮತ್ತು ವಿಶೇಷ ರಕ್ಷಣೆಗಳು.–** ಅನುಸೂಚಿಯಲ್ಲಿ ನಿರೂಪಿಸಿರುವ ಒಡಂಬಡಿಕೆಯ 38ನೇ ಅನುಚ್ಛೇದದ ಉದ್ದೇಶಕ್ಕಾಗಿ, ಭಾರತದ ನಾಗರಿಕನು, ಆ ಅನುಚ್ಛೇದದಲ್ಲಿ ನಿರೂಪಿಸಿರುವಂಥವುಗಳನ್ನು ಹೊರತುಪಡಿಸಿ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅವನಿಗೆ ನೀಡಿರುವಂಥ ಹೆಚ್ಚುವರಿ ವಿಶೇಷಾಧಿಕಾರಗಳಿಗೆ ಮತ್ತು ವಿಶೇಷ ರಕ್ಷಣೆಗಳಿಗೆ ಮಾತ್ರ ಹಕ್ಕುಳ್ಳವನಾಗಿರತಕ್ಕದ್ದು.

**8. ರಾಜತಾಂತ್ರಿಕ ಆವರಣಗಳ ಒಳಗೆ ಪ್ರವೇಶಿಸುವುದರ ಮೇಲೆ ನಿರ್ಬಂಧಗಳು.–** ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ ಅಥವಾ ಯಾವುದೇ ಸಾರ್ವಜನಿಕ ಪ್ರಾಧಿಕಾರದ ಯಾರೇ ಲೋಕನೌಕರ ಅಥವಾ ಏಜೆಂಟನು, ರಾಜತಾಂತ್ರಿಕ ನಿಯೋಗದ ಮುಖ್ಯಸ್ಥನ ಸಮ್ಮತಿ ಪಡೆದ

ಹೊರತು, ಕಾನೂನು ಆದೇಶಿಕೆಯನ್ನು ಜಾರಿ ಮಾಡುವ ಉದ್ದೇಶಕ್ಕಾಗಿ ರಾಜತಾಂತ್ರಿಕ ನಿಯೋಗದ ಆವರಣಗಳನ್ನು ಪ್ರವೇಶಿಸತಕ್ಕದ್ದಲ್ಲ. ಅಂಥ ಸಮ್ಮತಿಯನ್ನು ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯದ ಮೂಲಕ ಪಡೆಯಬಹುದು.

**9. ಸಾಕ್ಷ್ಯ.–** ಯಾವುವೇ ವ್ಯವಹರಣೆಗಳಲ್ಲಿ, ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗಿನ ಯಾವುದೇ ವಿಶೇಷಾಧಿಕಾರಕ್ಕೆ ಅಥವಾ ವಿಶೇಷ ರಕ್ಷಣೆಗೆ ಹಕ್ಕುಳ್ಳವನಾಗಿದ್ದಾನೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯದ ಕಾರ್ಯದರ್ಶಿಯ ಮೂಲಕ ಅಥವಾ ಅವನ ಅಧಿಕಾರದ ಮೇರೆಗೆ ಆ ಪ್ರಶ್ನೆಗೆ ಸಂಬಂಧಿಸಿದಂತೆ ಯಾವುದೇ ಸಂಗತಿಯನ್ನು ನಿರೂಪಿಸಿ ನೀಡಿದ ಪ್ರಮಾಣಪತ್ರವು ಆ ಸಂಗತಿಗೆ ಸಂಬಂಧಿಸಿದಂತೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

**10. ನಿಯಮ ರಚನಾಧಿಕಾರ.–** ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

**11. ಈ ಅಧಿನಿಯಮದ ಮೇರೆಗೆ ಹೊರಡಿಸಿದ ಅಧಿಸೂಚನೆಗಳನ್ನು ಮತ್ತು ರಚಿಸಿದ ನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು.–** ಈ ಅಧಿನಿಯಮದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಮತ್ತು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ಹೊರಡಿಸಿದ ಅಥವಾ ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ಅಧಿಸೂಚನೆಯಲ್ಲಿ ಅಥವಾ ಸಂದರ್ಭಾನುಸಾರ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ಅಧಿಸೂಚನೆಯನ್ನು ಅಥವಾ ನಿಯಮವನ್ನು ಹೊರಡಿಸಕೂಡದೆಂದು ಅಥವಾ ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ಅಧಿಸೂಚನೆಯು ಅಥವಾ ನಿಯಮವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ಅಧಿಸೂಚನೆಯ ಅಥವಾ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

**ಅನುಸೂಚಿ**

**(2ನೇ ಪ್ರಕರಣವನ್ನು ನೋಡಿ)**

**ಕಾನೂನು ಬಲವನ್ನು ಹೊಂದಿರತಕ್ಕ ರಾಜತಾಂತ್ರಿಕ ಸಂಬಂಧಗಳ ವಿಯೆನ್ನಾ ಒಡಂಬಡಿಕೆ, 1961ರ ಉಪಬಂಧಗಳು**

**1ನೇ ಅನುಚ್ಛೇದ**

ಪ್ರಸ್ತುತ ಒಡಂಬಡಿಕೆಯ ಉದ್ದೇಶಕ್ಕಾಗಿ, ಈ ಮುಂದಿನ ಪದಾವಳಿಗಳು ಈ ಕೆಳಗೆ ಅವಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು:

(ಎ) "ನಿಯೋಗದ ಮುಖ್ಯಸ್ಥ" ಎಂದರೆ ನಿಯೋಗವನ್ನು ಕಳುಹಿಸುವ ರಾಷ್ಟ್ರದಿಂದ ಆ ಸ್ಥಾನಬಲದಲ್ಲಿ ಕಾರ್ಯ ನಿರ್ವಹಿಸಲು ಕರ್ತವ್ಯ ವಿಧಿಸಲ್ಪಟ್ಟಿರುವ ವ್ಯಕ್ತಿ;

(ಬಿ) "ನಿಯೋಗದ ಸದಸ್ಯರು" ಎಂದರೆ ನಿಯೋಗದ ಮುಖ್ಯಸ್ಥ ಮತ್ತು ನಿಯೋಗದ ಸಿಬ್ಬಂದಿವರ್ಗದ ಸದಸ್ಯರು;

(ಸಿ) "ನಿಯೋಗದ ಸಿಬ್ಬಂದಿವರ್ಗದ ಸದಸ್ಯರು" ಎಂದರೆ ನಿಯೋಗದ ರಾಜತಾಂತ್ರಿಕ ಸಿಬ್ಬಂದಿವರ್ಗದ, ಆಡಳಿತಾತ್ಮಕ ಮತ್ತು ತಾಂತ್ರಿಕ ಸಿಬ್ಬಂದಿವರ್ಗದ ಮತ್ತು ಸೇವಾ ಸಿಬ್ಬಂದಿವರ್ಗದ ಸದಸ್ಯರು;

(ಡಿ) "ರಾಜತಾಂತ್ರಿಕ ಸಿಬ್ಬಂದಿವರ್ಗದ ಸದಸ್ಯರು" ಎಂದರೆ ರಾಜತಾಂತ್ರಿಕ ದರ್ಜೆಯನ್ನು ಹೊಂದಿರುವ ನಿಯೋಗದ ಸಿಬ್ಬಂದಿವರ್ಗದ ಸದಸ್ಯರು;

(ಇ) "ರಾಜತಾಂತ್ರಿಕ ಏಜೆಂಟ್" ಎಂದರೆ ನಿಯೋಗದ ಮುಖ್ಯಸ್ಥ ಅಥವಾ ನಿಯೋಗದ ರಾಜತಾಂತ್ರಿಕ ಸಿಬ್ಬಂದಿ ವರ್ಗದ ಸದಸ್ಯ;

(ಎಫ್) "ಆಡಳಿತಾತ್ಮಕ ಮತ್ತು ತಾಂತ್ರಿಕ ಸಿಬ್ಬಂದಿವರ್ಗದ ಸದಸ್ಯರು" ಎಂದರೆ ನಿಯೋಗದ ಆಡಳಿತಾತ್ಮಕ ಮತ್ತು ತಾಂತ್ರಿಕ ಸೇವೆಯಲ್ಲಿ ನಿಯೋಜಿತರಾಗಿರುವ ನಿಯೋಗದ ಸಿಬ್ಬಂದಿವರ್ಗದ ಸದಸ್ಯರು;

(ಜಿ) "ಸೇವಾ ಸಿಬ್ಬಂದಿವರ್ಗದ ಸದಸ್ಯರು" ಎಂದರೆ ನಿಯೋಗದ ಗೃಹ ಸೇವೆಯಲ್ಲಿರುವ ನಿಯೋಗದ ಸಿಬ್ಬಂದಿವರ್ಗದ ಸದಸ್ಯರು;

(ಹೆಚ್) "ಖಾಸಗಿ ನೌಕರ" ಎಂದರೆ ನಿಯೋಗದ ಸದಸ್ಯನ ಗೃಹ ಸೇವೆಯಲ್ಲಿರುವ ಆದರೆ, ನಿಯೋಗವನ್ನು ಕಳುಹಿಸುವ ರಾಷ್ಟ್ರದ ನೌಕರನಲ್ಲದ ವ್ಯಕ್ತಿ;

(ಐ) "ನಿಯೋಗದ ಆವರಣಗಳು" ಎಂದರೆ ಒಡೆತನ ಯಾರಿಗೆ ಸೇರಿದ್ದರೂ ಸರಿಯೇ ನಿಯೋಗದ ಮುಖ್ಯಸ್ಥನ ನಿವಾಸವೂ ಸೇರಿದಂತೆ ನಿಯೋಗದ ಉದ್ದೇಶಕ್ಕಾಗಿ ಉಪಯೋಗಿಸಲಾಗುವ ಕಟ್ಟಡಗಳು ಅಥವಾ ಕಟ್ಟಡಗಳ ಭಾಗಗಳು ಮತ್ತು ಅವಕ್ಕೆ ಸಂಬಂಧಪಟ್ಟ ಭೂಮಿ.

## 22ನೇ ಅನುಚ್ಛೇದ

1. ನಿಯೋಗದ ಆವರಣಗಳೊಳಗೆ ಅತಿಕ್ರಮವಾಗಿ ಪ್ರವೇಶಿಸಲು ಸಾಧ್ಯವಾಗುವಂತಿರತಕ್ಕುದಲ್ಲ ಮತ್ತು ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ಏಜೆಂಟರು, ನಿಯೋಗದ ಮುಖ್ಯಸ್ಥನ ಸಮ್ಮತಿ ಪಡೆದ ಹೊರತು ಅದರೊಳಗೆ ಪ್ರವೇಶಿಸತಕ್ಕುದಲ್ಲ.

2. ಯಾವುದೇ ಅಕ್ರಮ ಪ್ರವೇಶದಿಂದ ಅಥವಾ ಹಾನಿಯಿಂದ ನಿಯೋಗದ ಆವರಣಗಳನ್ನು ಸಂರಕ್ಷಿಸಲು ಮತ್ತು ನಿಯೋಗದ ಶಾಂತಿಗೆ ಭಂಗವುಂಟಾಗುವುದನ್ನು ಅಥವಾ ಘನತೆಗೆ ಕುಂದುಂಟಾಗುವುದನ್ನು ತಡೆಯಲು ಎಲ್ಲಾ ಯುಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ವಿಶೇಷ ಕರ್ತವ್ಯವಾಗಿರುತ್ತದೆ.

3. ನಿಯೋಗದ ಆವರಣಗಳು, ಅಲ್ಲಿನ ಸಾಮಾನು ಸರಂಜಾಮುಗಳು ಮತ್ತು ಅದರ ಮೇಲಿನ ಇತರ ಸ್ವತ್ತು ಮತ್ತು ನಿಯೋಗದ ಸಾರಿಗೆ ಸಾಧನಗಳು – ಶೋಧನೆ, ಕಡ್ಡಾಯ ಕೋರಿಕೆ, ಜಪ್ತಿ ಅಥವಾ ಅಮಲ್ಜಾರಿಯಿಂದ ವಿಶೇಷ ವಿನಾಯಿತಿ ಹೊಂದಿರತಕ್ಕದ್ದು.

**23ನೇ ಅನುಚ್ಛೇದ**

1. ನಿಯೋಗವನ್ನು ಕಳುಹಿಸುವ ರಾಷ್ಟ್ರ ಮತ್ತು ನಿಯೋಗದ ಮುಖ್ಯಸ್ಥನು, ನಿಯೋಗದ ಆವರಣಗಳ ಒಡೆತನ ಹೊಂದಿರಲಿ ಅಥವಾ ಗುತ್ತಿಗೆಯ ಮೇಲೆ ಅವುಗಳನ್ನು ಪಡೆದಿರಲಿ, ನಿರ್ದಿಷ್ಟ ಸೇವೆಗಳನ್ನು ಸಲ್ಲಿಸಿದ್ದಕ್ಕಾಗಿ ಮಾಡಬೇಕಾದ ಸಂದಾಯವನ್ನು ಹೊರತುಪಡಿಸಿ, ಇತರ ಎಲ್ಲ ಪ್ರಾಂತೀಯ ಅಥವಾ ಮುನಿಸಿಪಲ್ ಶುಲ್ಕಗಳಿಂದ ಮತ್ತು ತೆರಿಗೆಗಳಿಂದ ವಿನಾಯಿತಿ ಹೊಂದಿರತಕ್ಕದ್ದು.

2. ನಿಯೋಗವನ್ನು ಕಳುಹಿಸುವ ರಾಷ್ಟ್ರದೊಂದಿಗೆ ಅಥವಾ ನಿಯೋಗದ ಮುಖ್ಯಸ್ಥನೊಂದಿಗೆ ಕರಾರು ಮಾಡಿಕೊಳ್ಳುವ ವ್ಯಕ್ತಿಗಳು ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ಕಾನೂನಿನ ಮೇರೆಗೆ ಸಂದಾಯ ಮಾಡಬೇಕಾದಂಥ ಬಾಕಿಗಳಿಗೆ ಮತ್ತು ತೆರಿಗೆಗಳಿಗೆ ಈ ಅನುಚ್ಛೇದದಲ್ಲಿ ಉಲ್ಲೇಖಿಸಿರುವ ತೆರಿಗೆ ವಿನಾಯಿತಿಯು ಅನ್ವಯವಾಗತಕ್ಕುದಲ್ಲ.

**24ನೇ ಅನುಚ್ಛೇದ**

ನಿಯೋಗದ ಪ್ರಾಚೀನ ಕಾಗದ ಪತ್ರಗಳನ್ನು ಮತ್ತು ದಸ್ತಾವೇಜುಗಳನ್ನು ಯಾವುದೇ ಕಾಲದಲ್ಲಿ ಮತ್ತು ಅವು ಎಲ್ಲೇ ಇರಲಿ ನಾಶಗೊಳಿಸಲು ಸಾಧ್ಯವಾಗುವಂತಿರತಕ್ಕುದಲ್ಲ.

**27ನೇ ಅನುಚ್ಛೇದ**

1. ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು ಎಲ್ಲಾ ಅಧಿಕೃತ ಉದ್ದೇಶಗಳಿಗಾಗಿ ನಿಯೋಗವು ನಡೆಸುವ ಮುಕ್ತ ಸಂಪರ್ಕಕ್ಕೆ ಅನುಮತಿಸತಕ್ಕದ್ದು ಮತ್ತು ಅದನ್ನು ರಕ್ಷಿಸತಕ್ಕದ್ದು. ನಿಯೋಗವನ್ನು ಕಳುಹಿಸುವ ರಾಷ್ಟ್ರದ ಸರ್ಕಾರ ಮತ್ತು ಇತರ ನಿಯೋಗಗಳು ಮತ್ತು ಕಾನ್ಸಲ್ ಕಚೇರಿಗಳು ಇರುವ ಕಡೆಗಳಲ್ಲೆಲ್ಲಾ, ಅವುಗಳೊಂದಿಗೆ ಸಂಪರ್ಕ ಹೊಂದಲು ನಿಯೋಗವು ರಾಜತಾಂತ್ರಿಕ ಪತ್ರ ವಾಹಕರು ಮತ್ತು ಗೂಢ ಅಥವಾ ಗುಪ್ತ ಲಿಪಿಯಲ್ಲಿನ ಸಂದೇಶಗಳೂ ಸೇರಿದಂತೆ ಎಲ್ಲಾ ಯುಕ್ತ ಸಾಧನೋಪಾಯಗಳನ್ನು ಉಪಯೋಗಿಸಿಕೊಳ್ಳಬಹುದು. ಆದರೂ, ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ಸಮ್ಮತಿಯನ್ನು ಪಡೆದ ಮಾತ್ರವೇ ನಿಯೋಗವು ವೈರ್‌ಲೆಸ್ ಟ್ರಾನ್ಸ್‌ಮಿಟರನ್ನು ಸ್ಥಾಪಿಸಿ, ಉಪಯೋಗಿಸಿಕೊಳ್ಳಬಹುದು.

2. ನಿಯೋಗದ ಅಧಿಕೃತ ಪತ್ರ ವ್ಯವಹಾರವು ನಾಶಗೊಳಿಸಲು ಸಾಧ್ಯವಾಗುವಂತಿರತಕ್ಕುದಲ್ಲ. ಅಧಿಕೃತ ಪತ್ರ ವ್ಯವಹಾರವೆಂದರೆ, ನಿಯೋಗಕ್ಕೆ ಮತ್ತು ಅದರ ಪ್ರಕಾರ್ಯಗಳಿಗೆ ಸಂಬಂಧಿಸಿದ ಎಲ್ಲಾ ಪತ್ರ ವ್ಯವಹಾರ.

3. ರಾಜತಾಂತ್ರಿಕ ಚೀಲವನ್ನು ತೆರೆಯತಕ್ಕುದಲ್ಲ ಅಥವಾ ತಡೆಹಿಡಿಯತಕ್ಕುದಲ್ಲ.

4. ರಾಜತಾಂತ್ರಿಕ ಚೀಲದ ಭಾಂಗಿಗಳು, ಅವುಗಳ ಸ್ವರೂಪವನ್ನು ಸೂಚಿಸುವ ಬಾಹ್ಯ ಗುರುತುಗಳನ್ನು ಎದ್ದುಕಾಣುವಂತೆ ಹೊಂದಿರಬೇಕು ಮತ್ತು ಅವು ರಾಜತಾಂತ್ರಿಕ ದಸ್ತಾವೇಜುಗಳನ್ನು ಅಥವಾ ಅಧಿಕೃತ ಉಪಯೋಗಕ್ಕಾಗಿ ಇರುವ ವಸ್ತುಗಳನ್ನು ಮಾತ್ರ ಒಳಗೊಂಡಿರಬೇಕು.

5. ರಾಜತಾಂತ್ರಿಕ ಪತ್ರ ವಾಹಕನ ಸ್ಥಾನಮಾನವನ್ನು ಮತ್ತು ರಾಜತಾಂತ್ರಿಕ ಚೀಲದ ಭಾಂಗಿಗಳ ಸಂಖ್ಯೆಯನ್ನು ಸೂಚಿಸುವ ಒಂದು ಅಧಿಕೃತ ದಸ್ತಾವೇಜನ್ನು ಅವನಿಗೆ ಒದಗಿಸತಕ್ಕದ್ದು ಮತ್ತು ಅವನು ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು ಅವನಿಗೆ ರಕ್ಷಣೆ ನೀಡತಕ್ಕದ್ದು. ವ್ಯಕ್ತಿಗತವಾಗಿ ಹಾನಿಗೊಳಗಾಗದಂಥ ಅನುಕೂಲವು ಅವನಿಗೆ ಇರತಕ್ಕದ್ದು ಮತ್ತು ಯಾವುದೇ ರೀತಿಯಲ್ಲಿ ಅವನು ದಸ್ತಗಿರಿಗೆ ಅಥವಾ ಸ್ಥಾನಬದ್ಧತೆಗೆ ಗುರಿಯಾಗತಕ್ಕದ್ದಲ್ಲ.

6. ನಿಯೋಗವನ್ನು ಕಳುಹಿಸುವ ರಾಷ್ಟ್ರವು ಅಥವಾ ನಿಯೋಗವು ರಾಜತಾಂತ್ರಿಕ ಪತ್ರ ವಾಹಕರನ್ನು ತಾತ್ಕಾಲಿಕವಾಗಿ ನಿಯೋಜಿಸಬಹುದು. ಅಂಥ ಸಂದರ್ಭಗಳಲ್ಲಿ, ಈ ಅನುಚ್ಛೇದದ 5ನೇ ಪ್ಯಾರಾದ ಉಪಬಂಧಗಳು ಸಹ ಅನ್ವಯವಾಗತಕ್ಕದ್ದು. ಆದರೆ, ಅಂಥ ಪತ್ರ ವಾಹಕನು ತನ್ನ ವಶದಲ್ಲಿನ ರಾಜತಾಂತ್ರಿಕ ಚೀಲವನ್ನು, ಅದನ್ನು ಪಡೆದಾತನಿಗೆ ಒಪ್ಪಿಸಿದಾಗ ಆ ಪ್ಯಾರಾದಲ್ಲಿ ನಮೂದಿಸಿರುವ ವಿಶೇಷ ರಕ್ಷಣೆಯು ಅನ್ವಯವಾಗುವುದು ನಿಂತುಹೋಗತಕ್ಕದ್ದು.

7. ರಾಜತಾಂತ್ರಿಕ ಚೀಲವನ್ನು ಅಧಿಕೃತ ಪ್ರವೇಶ ಸ್ಥಳದಲ್ಲಿ ಇಳಿಯಲು ನಿಗದಿಯಾಗಿರುವ ವಾಣಿಜ್ಯ ವಿಮಾನದ ಕ್ಯಾಪ್ಟನ್‌ನಿಗೆ ಒಪ್ಪಿಸಬಹುದು. ಚೀಲದ ಭಾಂಗಿಗಳ ಸಂಖ್ಯೆಯನ್ನು ಸೂಚಿಸುವ ಅಧಿಕೃತ ದಸ್ತಾವೇಜನ್ನು ಅವನಿಗೆ ಕೊಡತಕ್ಕದ್ದು. ಆದರೆ, ಅವನನ್ನು ರಾಜತಾಂತ್ರಿಕ ಪತ್ರ ವಾಹಕನೆಂದು ಪರಿಗಣಿಸತಕ್ಕದ್ದಲ್ಲ. ನಿಯೋಗವು, ರಾಜತಾಂತ್ರಿಕ ಚೀಲವನ್ನು ವಿಮಾನದ ಕ್ಯಾಪ್ಟನ್‌ನಿಂದ ನೇರವಾಗಿ ಮತ್ತು ಸುಗಮವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳಲು ತನ್ನ ಸದಸ್ಯರ ಪೈಕಿ ಒಬ್ಬರನ್ನು ಕಳುಹಿಸಬಹುದು.

## 28ನೇ ಅನುಚ್ಛೇದ

ನಿಯೋಗವು, ತನ್ನ ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವಾಗ ವಿಧಿಸುವ ಫೀಜುಗಳು ಮತ್ತು ಚಾರ್ಜುಗಳು ಎಲ್ಲಾ ಶುಲ್ಕಗಳಿಂದ ಮತ್ತು ತೆರಿಗೆಗಳಿಂದ ವಿನಾಯಿತಿ ಹೊಂದಿರತಕ್ಕದ್ದು.

## 29ನೇ ಅನುಚ್ಛೇದ

ರಾಜತಾಂತ್ರಿಕ ಏಜೆಂಟನಿಗೆ ದೈಹಿಕ ಸುರಕ್ಷತೆ ಇರತಕ್ಕದ್ದು. ಅವನು ಯಾವುದೇ ರೀತಿಯ ದಸ್ತಗಿರಿ ಅಥವಾ ಸ್ಥಾನಬದ್ಧತೆಗೆ ಗುರಿಯಾಗಲು ಅವಕಾಶವಿರತಕ್ಕದ್ದಲ್ಲ. ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು ಅವನನ್ನು ಯುಕ್ತ ಗೌರವದಿಂದ ನೋಡಿಕೊಳ್ಳತಕ್ಕದ್ದು ಮತ್ತು ದೈಹಿಕವಾಗಿ ಅವನ ಮೇಲೆ ಹಲ್ಲೆ ನಡೆಯುವುದನ್ನು, ಅವನ ಸ್ವಾತಂತ್ರ್ಯ ಅಥವಾ ಘನತೆಗೆ ಯಾವುದೇ ರೀತಿಯಲ್ಲಿ ಧಕ್ಕೆಯಾಗುವುದನ್ನು ತಡೆಯಲು ಎಲ್ಲಾ ಸಮುಚಿತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

## 30ನೇ ಅನುಚ್ಛೇದ

1. ರಾಜತಾಂತ್ರಿಕ ಏಜೆಂಟನ ಖಾಸಗಿ ನಿವಾಸಕ್ಕೆ ನಿಯೋಗದ ಆವರಣಗಳಂತೆಯೇ ಅಕ್ರಮವಾಗಿ ಪ್ರವೇಶಿಸಲು ಸಾಧ್ಯವಾಗುವಂತಿರತಕ್ಕುದಲ್ಲ ಮತ್ತು ಅದಕ್ಕೆ ರಕ್ಷಣೆಯನ್ನು ಒದಗಿಸತಕ್ಕದ್ದು.

2. ಅವನ ಕಾಗದಪತ್ರಗಳಿಗೆ, ಪತ್ರ ವ್ಯವಹಾರಗಳಿಗೆ ಮತ್ತು 31ನೇ ಅನುಚ್ಛೇದದ 3ನೇ ಪ್ಯಾರಾದಲ್ಲಿ ಉಪಬಂಧಿಸಿರುವುದನ್ನು ಉಳಿದು, ಅವನ ಸ್ವತ್ತು ನಾಶಗೊಳಿಸಲು ಸಾಧ್ಯವಾಗುವಂತಿರತಕ್ಕುದಲ್ಲ.

## 31ನೇ ಅನುಚ್ಛೇದ

1. ರಾಜತಾಂತ್ರಿಕ ಏಜೆಂಟನು, ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ಆಪರಾಧಿಕ ಕಾನೂನು ವ್ಯಾಪ್ತಿಯಿಂದ ವಿಶೇಷ ರಕ್ಷಣೆ ಹೊಂದಿರತಕ್ಕದ್ದು. ಈ ಕೆಳಕಂಡ ಸಂದರ್ಭಗಳನ್ನು ಹೊರತುಪಡಿಸಿ, ಅವನು ಆ ರಾಷ್ಟ್ರದ ಸಿವಿಲ್ ಮತ್ತು ಆಡಳಿತಾತ್ಮಕ ಅಧಿಕಾರ ವ್ಯಾಪ್ತಿಯಿಂದಲೂ ಸಹ ವಿಶೇಷ ರಕ್ಷಣೆಯನ್ನು ಹೊಂದಿರತಕ್ಕದ್ದು:

(ಎ) ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ರಾಜ್ಯಕ್ಷೇತ್ರದೊಳಗಿರುವ ಖಾಸಗಿ ಸ್ಥಿರಸ್ವತ್ತನ್ನು ನಿಯೋಗದ ಉದ್ದೇಶಗಳಿಗಾಗಿ ಕಳುಹಿಸುವ ರಾಷ್ಟ್ರದ ಪರವಾಗಿ ಧಾರಣ ಮಾಡಿದ್ದ ಹೊರತು ಆ ಖಾಸಗಿ ಸ್ಥಿರಸ್ವತ್ತಿಗೆ ಸಂಬಂಧಪಟ್ಟಂತೆ ಕೈಗೊಂಡ ವಾಸ್ತವ ಕ್ರಮ;

(ಬಿ) ಯಾವ ಉತ್ತರಾಧಿಕಾರದಲ್ಲಿ ರಾಜತಾಂತ್ರಿಕ ಏಜೆಂಟನು ಖಾಸಗಿ ವ್ಯಕ್ತಿಯಾಗಿ ಆದರೆ ನಿಯೋಗವನ್ನು ಕಳುಹಿಸುವ ರಾಷ್ಟ್ರದ ಪರವಾಗಿಯಲ್ಲದೆ ಕಾರ್ಯನಿರ್ವಾಹಕನಾಗಿ, ಆಡಳಿತಗಾರನಾಗಿ, ವಾರಸುದಾರನಾಗಿ ಅಥವಾ ಲೆಗಟಿಯಾಗಿ ಒಳಗೊಂಡಿರುವನೋ ಆ ಉತ್ತರಾಧಿಕಾರಕ್ಕೆ ಸಂಬಂಧಪಟ್ಟಂತೆ ಕೈಗೊಂಡ ಒಂದು ಕ್ರಮ;

(ಸಿ) ರಾಜತಾಂತ್ರಿಕ ಏಜೆಂಟನು, ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದಲ್ಲಿ ಅವನ ಅಧಿಕೃತ ಪ್ರಕಾರ್ಯಗಳ ವ್ಯಾಪ್ತಿಯ ಹೊರಗೆ ಚಲಾಯಿಸಿದ ಯಾವುದೇ ವೃತ್ತೀಯ ಅಥವಾ ವಾಣಿಜ್ಯ ಕಾರ್ಯಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಕೈಗೊಂಡ ಒಂದು ಕ್ರಮ.

2. ರಾಜತಾಂತ್ರಿಕ ಏಜೆಂಟನು, ಸಾಕ್ಷಿದಾರನಾಗಿ ಸಾಕ್ಷ್ಯ ನೀಡಲು ಹೊಣೆಗಾರನಾಗಿರುವುದಿಲ್ಲ.

3. ಈ ಅನುಚ್ಛೇದದ 1ನೇ ಪ್ಯಾರಾದ (ಎ), (ಬಿ) ಮತ್ತು (ಸಿ) ಉಪ-ಪ್ಯಾರಾಗಳ ಅಡಿಯಲ್ಲಿ ಬರುವ ಪ್ರಕರಣಗಳಲ್ಲಿ ಹೊರತು ಇತರ ಯಾವುದೇ ಪ್ರಕರಣಗಳಲ್ಲಿ ರಾಜತಾಂತ್ರಿಕ ಏಜೆಂಟನ ಸಂಬಂಧದಲ್ಲಿ ಯಾವುದೇ ಜಾರಿ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ: ಪರಂತು, ಆ ಏಜೆಂಟನಿಗೆ ದೈಹಿಕವಾಗಿ ಹಾನಿಯಾಗದಂತೆ ಅಥವಾ ಅವನ ನಿವಾಸಕ್ಕೆ ಅತಿಕ್ರಮವಾಗಿ ಪ್ರವೇಶಿಸಲು ಸಾಧ್ಯವಾಗದಂತೆ ಒದಗಿಸಿದ ಅನುಕೂಲಕ್ಕೆ ಭಂಗ ಬಾರದಂತೆ ಸಂಬಂಧಪಟ್ಟ ಕ್ರಮಗಳನ್ನು ತೆಗೆದುಕೊಳ್ಳಬಹುದು.

4. ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ಅಧಿಕಾರವ್ಯಾಪ್ತಿಯಿಂದ ರಾಜತಾಂತ್ರಿಕ ಏಜೆಂಟನಿಗೆ ದೊರೆಯುವ ವಿಶೇಷ ರಕ್ಷಣೆಯು, ನಿಯೋಗವನ್ನು ಕಳುಹಿಸುವ ರಾಷ್ಟ್ರದ ಅಧಿಕಾರ ವ್ಯಾಪ್ತಿಯಿಂದ ಅವನಿಗೆ ವಿನಾಯಿತಿಯನ್ನು ಒದಗಿಸುವುದಿಲ್ಲ.

## 32ನೇ ಅನುಚ್ಛೇದ

1. ನಿಯೋಗವನ್ನು ಕಳುಹಿಸುವ ರಾಷ್ಟ್ರವು ರಾಜತಾಂತ್ರಿಕ ಏಜೆಂಟರ ಮತ್ತು 37ನೇ ಅನುಚ್ಛೇದದ ಮೇರೆಗಿನ ವಿಶೇಷ ರಕ್ಷಣೆಯನ್ನು ಅನುಭೋಗಿಸುವ ವ್ಯಕ್ತಿಗಳ ವ್ಯಾಪ್ತಿಯಿಂದ ಆ ವಿಶೇಷ ರಕ್ಷಣೆಯನ್ನು ಬಿಟ್ಟುಬಿಡಬಹುದು.

2. ಬಿಟ್ಟುಕೊಡುವಿಕೆಯು ಯಾವಾಗಲೂ ಸ್ಪಷ್ಟವಾಗಿರತಕ್ಕದ್ದು.

3. ರಾಜತಾಂತ್ರಿಕ ಏಜೆಂಟನು ಅಥವಾ 37ನೇ ಅನುಚ್ಛೇದದ ವ್ಯಾಪ್ತಿಯಲ್ಲಿನ ವಿಶೇಷ ರಕ್ಷಣೆಯನ್ನು ಅನುಭೋಗಿಸುವ ವ್ಯಕ್ತಿಯು ವ್ಯವಹರಣೆಗಳನ್ನು ಪ್ರಾರಂಭಿಸಿದರೆ, ಅದು ಪ್ರಧಾನ ಕ್ಲೇಮಿಗೆ ನೇರವಾಗಿ ಸಂಬಂಧಿಸಿದ ಯಾವುದೇ ಪ್ರತಿ ಕ್ಲೇಮಿನ ವ್ಯಾಪ್ತಿಯಲ್ಲಿನ ವಿಶೇಷ ರಕ್ಷಣೆಯನ್ನು ಕೋರದಂತೆ ಅವನನ್ನು ತಡೆಯತಕ್ಕದ್ದು.

4. ಸಿವಿಲ್ ಅಥವಾ ಆಡಳಿತಾತ್ಮಕ ವ್ಯವಹರಣೆಗಳ ವ್ಯಾಪ್ತಿಯಿಂದ ವಿಶೇಷ ರಕ್ಷಣೆಯನ್ನು ಬಿಟ್ಟುಕೊಡುವುದು, ತೀರ್ಪಿನ ಜಾರಿಗೆ ಸಂಬಂಧಪಟ್ಟಂತೆಯೂ ವಿಶೇಷ ರಕ್ಷಣೆಗಳನ್ನು ಬಿಟ್ಟುಕೊಡುವುದರ ಇಂಗಿತವೆಂದು ಭಾವಿಸತಕ್ಕುದಲ್ಲ. ಅದಕ್ಕೆ ಪ್ರತ್ಯೇಕ ಬಿಟ್ಟು ಕೊಡುವಿಕೆಯು ಅವಶ್ಯವಾಗಿರತಕ್ಕದ್ದು.

**33ನೇ ಅನುಚ್ಛೇದ**

1. ಈ ಅನುಚ್ಛೇದದ 3ನೇ ಪ್ಯಾರಾದ ಉಪಬಂಧಗಳಿಗೊಳಪಟ್ಟು, ಒಬ್ಬ ರಾಜತಾಂತ್ರಿಕ ಏಜೆಂಟನು, ನಿಯೋಗವನ್ನು ಕಳುಹಿಸುವ ರಾಷ್ಟ್ರ ಸಲ್ಲಿಸಿದ ಸೇವೆಗಳಿಗೆ ಸಂಬಂಧಿಸಿದಂತೆ, ನಿಯೋಗವನ್ನು ಸ್ವೀಕರಿಸುವ ರಾಷ್ಟ್ರದಲ್ಲಿ ಜಾರಿಯಲ್ಲಿರಬಹುದಾದ ಸಾಮಾಜಿಕ ಭದ್ರತಾ ಉಪಬಂಧಗಳಿಂದ ವಿನಾಯಿತಿ ಪಡೆಯತಕ್ಕದ್ದು.

2. ಈ ಅನುಚ್ಛೇದದ 1ನೇ ಪ್ಯಾರಾದಲ್ಲಿ ನೀಡಲಾದ ವಿನಾಯಿತಿಯು ರಾಜತಾಂತ್ರಿಕ ಏಜೆಂಟನ ಏಕಮಾತ್ರ ನೌಕರಿಯಲ್ಲಿರುವ ಖಾಸಗಿ ನೌಕರನಿಗೂ ಸಹ ಈ ಕೆಳಕಂಡ ಷರತ್ತುಗಳ ಮೇಲೆ ಅನ್ವಯವಾಗತಕ್ಕದ್ದು:

(ಎ) ಅವರು, ನಿಯೋಗವನ್ನು ಸ್ವೀಕರಿಸುವ ರಾಷ್ಟ್ರದ ರಾಷ್ಟ್ರಕರಾಗಿರಕೂಡದು ಅಥವಾ ಖಾಯಂ ನಿವಾಸಿಗಳಾಗಿರಕೂಡದು; ಮತ್ತು

(ಬಿ) ನಿಯೋಗವನ್ನು ಕಳುಹಿಸುವ ರಾಷ್ಟ್ರದಲ್ಲಿ ಅಥವಾ ಮೂರನೇ ರಾಷ್ಟ್ರದಲ್ಲಿ ಜಾರಿಯಲ್ಲಿರಬಹುದಾದ ಸಾಮಾಜಿಕ ಭದ್ರತಾ ಉಪಬಂಧಗಳಿಗೆ ಅವರು ಒಳಪಟ್ಟಿರಬೇಕು.

3. ಈ ಅನುಚ್ಛೇದದ 2ನೇ ಪ್ಯಾರಾದಲ್ಲಿ ಉಪಬಂಧಿಸಿದ ವಿನಾಯಿತಿಯು ಅನ್ವಯವಾಗದಿರುವಂಥ ವ್ಯಕ್ತಿಗಳನ್ನು ನಿಯೋಜಿಸಿಕೊಳ್ಳುವ ರಾಜತಾಂತ್ರಿಕ ಏಜೆಂಟನು, ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ಸಾಮಾಜಿಕ ಭದ್ರತಾ ಉಪಬಂಧಗಳು ನಿಯೋಜಕರ ಮೇಲೆ ವಿಧಿಸುವಂಥ ಹೊಣೆಗಳನ್ನು ಪಾಲಿಸತಕ್ಕದ್ದು.

4. ಈ ಅನುಚ್ಛೇದದ 1ನೇ ಮತ್ತು 2ನೇ ಪ್ಯಾರಾಗಳಲ್ಲಿ ಉಪಬಂಧಿಸಿದ ವಿನಾಯಿತಿಯು ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ಸಾಮಾಜಿಕ ಭದ್ರತಾ ವ್ಯವಸ್ಥೆಯಲ್ಲಿ ಸ್ವಯಿಚ್ಛೆಯಿಂದ ಭಾಗವಹಿಸುವುದನ್ನು ಅಡ್ಡಿಪಡಿಸತಕ್ಕದ್ದಲ್ಲ. ಪರಂತು ಹಾಗೆ ಭಾಗವಹಿಸಲು ಆ ರಾಷ್ಟ್ರವು ಅನುಮತಿ ನೀಡಿರಬೇಕು.

5. ಈ ಅನುಚ್ಛೇದದ ಉಪಬಂಧಗಳು ಸಾಮಾಜಿಕ ಭದ್ರತೆಗೆ ಸಂಬಂಧಿಸಿದಂತೆ ಈ ಹಿಂದೆ ಮಾಡಿಕೊಂಡ ದ್ವಿಪಕ್ಷೀಯ ಅಥವಾ ಬಹುಪಕ್ಷೀಯ ಒಪ್ಪಂದಗಳ ಮೇಲೆ ಪರಿಣಾಮ ಬೀರತಕ್ಕದ್ದಲ್ಲ ಮತ್ತು ಇನ್ನು ಮುಂದೆ ಅಂಥ ಒಪ್ಪಂದ ಮಾಡಿಕೊಳ್ಳುವುದನ್ನು ಪ್ರತಿಬಂಧಿಸತಕ್ಕದ್ದಲ್ಲ.

## 34ನೇ ಅನುಚ್ಛೇದ

ಒಬ್ಬ ರಾಜತಾಂತ್ರಿಕ ಏಜೆಂಟನು, ಈ ಕೆಳಕಂಡ ಶುಲ್ಕಗಳು ಮತ್ತು ತೆರಿಗೆಗಳನ್ನು ಹೊರತುಪಡಿಸಿ ಎಲ್ಲ ವ್ಯಕ್ತಿಗತ ಅಥವಾ ವಾಸ್ತವ, ರಾಷ್ಟ್ರೀಯ, ಪ್ರಾದೇಶಿಕ ಅಥವಾ ಪುರಸಭಾ ಶುಲ್ಕಗಳು ಮತ್ತು ತೆರಿಗೆಗಳಿಂದ ವಿನಾಯಿತಿ ಪಡೆಯತಕ್ಕದ್ದು:

(ಎ) ಸರಕುಗಳ ಅಥವಾ ಸೇವೆಗಳ ಬೆಲೆಯಲ್ಲಿ ಸಾಮಾನ್ಯವಾಗಿ ಸೇರಿರುವ ಒಂದು ವಸ್ತುವಿನ ಪರೋಕ್ಷ ತೆರಿಗೆಗಳು;

(ಬಿ) ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ರಾಜ್ಯ ಕ್ಷೇತ್ರದಲ್ಲಿರುವ ಖಾಸಗಿ ಸ್ಥಿರಸ್ವತ್ತನ್ನು, ನಿಯೋಗವನ್ನು ಕಳುಹಿಸುವ ರಾಷ್ಟ್ರದ ಪರವಾಗಿ ನಿಯೋಗದ ಉದ್ದೇಶಗಳಿಗಾಗಿ ಹೊಂದಿರದ ಹೊರತು, ಆ ಸ್ವತ್ತಿನ ಮೇಲಿನ ಶುಲ್ಕಗಳು ಮತ್ತು ತೆರಿಗೆಗಳು;

(ಸಿ) 39ನೇ ಅನುಚ್ಛೇದದ 4ನೇ ಪ್ಯಾರಾದ ಉಪಬಂಧಗಳಿಗೊಳಪಟ್ಟು, ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು ವಿಧಿಸುವ ಸಂಪದ, ಉತ್ತರಾಧಿಕಾರ ಅಥವಾ ವಾರಸುದಾರಿಕೆ ಸುಂಕಗಳು;

(ಡಿ) ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದಲ್ಲಿ ಮೂಲವನ್ನು ಹೊಂದಿರುವ ಖಾಸಗಿ ಆದಾಯದ ಮೇಲಿನ ಶುಲ್ಕಗಳು ಮತ್ತು ತೆರಿಗೆಗಳು ಮತ್ತು ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದಲ್ಲಿನ ವಾಣಿಜ್ಯ ಉದ್ಯಮಗಳಲ್ಲಿ ಮಾಡಿರುವ ಹೂಡಿಕೆಗಳ ಮೇಲಿನ ಬಂಡವಾಳ ತೆರಿಗೆಗಳು;

(ಇ) ನಿರ್ದಿಷ್ಟ ಸೇವೆಗಳನ್ನು ಸಲ್ಲಿಸಿದ್ದಕ್ಕಾಗಿ ವಿಧಿಸುವ ಶುಲ್ಕಗಳು;

(ಎಫ್) 23ನೇ ಅನುಚ್ಛೇದದ ಉಪಬಂಧಗಳಿಗೊಳಪಟ್ಟು ಸ್ಥಿರಸ್ವತ್ತಿಗೆ ಸಂಬಂಧಿಸಿದಂತೆ ನೋಂದಣಿಯ, ನ್ಯಾಯಾಲಯದ ಅಥವಾ ದಾಖಲೆಯ ಫೀಜುಗಳು, ಅಡಮಾನದ ಶುಲ್ಕಗಳು ಮತ್ತು ಮುದ್ರಾಂಕ ಶುಲ್ಕ.

## 35ನೇ ಅನುಚ್ಛೇದ

ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು ರಾಜತಾಂತ್ರಿಕ ಏಜೆಂಟರನ್ನು ಎಲ್ಲಾ ವ್ಯಕ್ತಿಗತ ಸೇವೆಗಳಿಂದ, ಯಾವುದೇ ರೀತಿಯ ಸಾರ್ವಜನಿಕ ಸೇವೆಯಿಂದ ಮತ್ತು ಕಡ್ಡಾಯ ಕೋರಿಕೆ, ಮಿಲಿಟರಿ ವಂತಿಗೆ ಮತ್ತು ವಸತಿ ಸೌಕರ್ಯಗಳಂಥವುಗಳಿಗೆ ಸಂಬಂಧಿಸಿದ ಮಿಲಿಟರಿ ಹೊಣೆಗಾರಿಕೆಗಳಿಂದ ವಿನಾಯಿತಿಗೊಳಿಸತಕ್ಕದ್ದು.

## 36ನೇ ಅನುಚ್ಛೇದ

1. ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು, ಅಂಗೀಕರಿಸಬಹುದಾದಂಥ ಕಾನೂನುಗಳು ಮತ್ತು ವಿನಿಯಮಗಳಿಗನುಸಾರವಾಗಿ:

(ಎ) ನಿಯೋಗದ ಅಧಿಕೃತ ಬಳಕೆಯ ವಸ್ತುಗಳು;

(ಬಿ) ರಾಜತಾಂತ್ರಿಕ ಏಜೆಂಟನ ಸಿಬ್ಬಂದಿ ವರ್ಗಕ್ಕೆ ಬೇಕಾಗುವ ವಸ್ತುಗಳೂ ಸೇರಿದಂತೆ ಅವನ ಅಥವಾ ಅವನ ಕುಟುಂಬದ ಸದಸ್ಯರ ಸ್ವಂತ ಬಳಕೆಯ ವಸ್ತುಗಳು

– ಇವುಗಳ ಪ್ರವೇಶಕ್ಕಾಗಿ ಅನುಮತಿಯನ್ನು ಕೊಡಬಹುದು ಮತ್ತು ದಾಸ್ತಾನು ವೆಚ್ಚ, ಸಾಗಣೆ ವೆಚ್ಚ ಮತ್ತು ಅದೇ ಬಗೆಯ ಸೇವಾ ವೆಚ್ಚಗಳನ್ನು ಹೊರತುಪಡಿಸಿ ಎಲ್ಲಾ ಸೀಮಾ ಸುಂಕಗಳು, ತೆರಿಗೆಗಳು ಮತ್ತು ಸಂಬಂಧಪಟ್ಟ ವೆಚ್ಚಗಳಿಂದ ಅವುಗಳಿಗೆ ವಿನಾಯಿತಿಯನ್ನು ನೀಡತಕ್ಕದ್ದು.

2. ರಾಜತಾಂತ್ರಿಕ ಏಜೆಂಟನ ಸ್ವಂತ ಸಾಮಾನು ಸರಂಜಾಮು, ಈ ಅನುಚ್ಛೇದದ 1ನೇ ಪ್ಯಾರಾದಲ್ಲಿ ನಮೂದಿಸಲಾದ ವಿನಾಯಿತಿಗಳಿಗೆ ಒಳಪಡದಿರುವ ವಸ್ತುಗಳನ್ನು ಅಥವಾ ಯಾವ ವಸ್ತುಗಳ ಆಮದು ಅಥವಾ ರಫ್ತನ್ನು, ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ಕಾನೂನಿನ ಮೂಲಕ ನಿಷೇಧಿಸಲಾಗಿದೆಯೋ ಅಥವಾ ರೋಗನಿರೋಧಕ ನಿರ್ಬಂಧ ವಿನಿಯಮನಗಳ ಮೂಲಕ ನಿಯಂತ್ರಿಸಲಾಗಿದೆಯೋ ಆ ವಸ್ತುಗಳನ್ನು ಒಳಗೊಂಡಿದೆಯೆಂದು ಪೂರ್ವಭಾವನೆ ಮಾಡಲು ಗಂಭೀರ ಕಾರಣಗಳಿದ್ದ ಹೊರತು, ಅವುಗಳ ತಪಾಸಣೆಯಿಂದ ವಿನಾಯಿತಿ ಹೊಂದಿರತಕ್ಕದ್ದು. ಅಂಥ ತಪಾಸಣೆಯನ್ನು ರಾಜತಾಂತ್ರಿಕ ಏಜೆಂಟನ ಅಥವಾ ಅವನ ಅಧಿಕೃತ ಪ್ರತಿನಿಧಿಯ ಸಮಕ್ಷಮದಲ್ಲಿ ಮಾತ್ರವೇ ನಡೆಸತಕ್ಕದ್ದು.

## 37ನೇ ಅನುಚ್ಛೇದ

1. ರಾಜತಾಂತ್ರಿಕ ಏಜೆಂಟನ ಪರಿವಾರವಾಗಿರುವ ಅವನ ಕುಟುಂಬದ ಸದಸ್ಯರು, ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ರಾಷ್ಟ್ರಕರಲ್ಲದಿದ್ದರೆ, 29 ರಿಂದ 36ರವರೆಗಿನ ಅನುಚ್ಛೇದಗಳಲ್ಲಿ ನಿರ್ದಿಷ್ಟಪಡಿಸಿರುವ ವಿಶೇಷಾಧಿಕಾರಗಳನ್ನು ಮತ್ತು ವಿಶೇಷ ರಕ್ಷಣೆಗಳನ್ನು ಅನುಭೋಗಿಸತಕ್ಕದ್ದು.

2. ನಿಯೋಗದ ಆಡಳಿತಾತ್ಮಕ ಮತ್ತು ತಾಂತ್ರಿಕ ಸಿಬ್ಬಂದಿ ವರ್ಗದ ಸದಸ್ಯರು ಮತ್ತು ಅವರವರ ಪರಿವಾರದ ಭಾಗವಾಗಿರುವ ಅವರ ಕುಟುಂಬಗಳ ಸದಸ್ಯರೂ ಸೇರಿದಂತೆ, ಅವರು ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ರಾಷ್ಟ್ರಕರಲ್ಲದಿದ್ದರೆ ಅಥವಾ ಖಾಯಂ ನಿವಾಸಿಗಳಲ್ಲದಿದ್ದರೆ, 31ನೇ ಅನುಚ್ಛೇದದ 1ನೇ ಪ್ಯಾರಾದಲ್ಲಿ ನಿರ್ದಿಷ್ಟಪಡಿಸಿದಂತೆ ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ಸಿವಿಲ್ ಮತ್ತು ಆಡಳಿತಾತ್ಮಕ ಅಧಿಕಾರ ವ್ಯಾಪ್ತಿಯಿಂದ ದೊರೆಯುವ ವಿಶೇಷ ರಕ್ಷಣೆಯು ಅವರ ಕರ್ತವ್ಯ ನಿರ್ವಹಣೆಯ ಹೊರಗೆ ನಿರ್ವಹಿಸಿದ ಕಾರ್ಯಗಳಿಗೆ ವ್ಯಾಪ್ತವಾಗತಕ್ಕದ್ದಲ್ಲವೆಂಬುದನ್ನು ಹೊರತುಪಡಿಸಿ, 29 ರಿಂದ 35 ರವರೆಗಿನ ಅನುಚ್ಛೇದಗಳಲ್ಲಿ ನಿರ್ದಿಷ್ಟಪಡಿಸಿದ ವಿಶೇಷಾಧಿಕಾರಗಳನ್ನು ಮತ್ತು ವಿಶೇಷ ರಕ್ಷಣೆಗಳನ್ನು ಅನುಭೋಗಿಸತಕ್ಕದ್ದು. ಅವರು ಪ್ರಥಮ ಸ್ಥಾಪನಾ ಸಮಯದಲ್ಲಿ ಆಮದು ಮಾಡಿಕೊಂಡ ವಸ್ತುಗಳ ಸಂಬಂಧದಲ್ಲಿ, 36ನೇ ಅನುಚ್ಛೇದದ 1ನೇ ಪ್ಯಾರಾದಲ್ಲಿ ನಿರ್ದಿಷ್ಟಪಡಿಸಿದ ವಿಶೇಷಾಧಿಕಾರಗಳನ್ನು ಸಹ ಅನುಭೋಗಿಸತಕ್ಕದ್ದು.

3. ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ರಾಷ್ಟ್ರಕರಲ್ಲದ ಅಥವಾ ಖಾಯಂ ನಿವಾಸಿಗಳಲ್ಲದ ನಿಯೋಗದ ಸೇವಾ ಸಿಬ್ಬಂದಿಯ ಸದಸ್ಯರು, ಅವರ ಕರ್ತವ್ಯಗಳ ನಿರ್ವಹಣೆಯ ಕ್ರಮದಲ್ಲಿ ನಿರ್ವಹಿಸಿದ ಕಾರ್ಯಗಳ ಸಂಬಂಧದಲ್ಲಿನ ವಿಶೇಷ ರಕ್ಷಣೆಯನ್ನು, ಅವರು ಹೊಂದಿರುವ ಉದ್ಯೋಗದ ಕಾರಣದಿಂದ ಪಡೆಯುವ ಉಪಲಬ್ಧಿಗಳ ಮೇಲಿನ ಶುಲ್ಕಗಳು ಮತ್ತು ತೆರಿಗೆಗಳಿಂದ ವಿನಾಯಿತಿಯನ್ನು ಮತ್ತು 33ನೇ ಅನುಚ್ಛೇದದಲ್ಲಿ ಒಳಗೊಂಡಿರುವ ವಿನಾಯಿತಿಯನ್ನು ಅನುಭೋಗಿಸತಕ್ಕದ್ದು.

4. ನಿಯೋಗದ ಸದಸ್ಯರ ಖಾಸಗಿ ನೌಕರರು, ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ರಾಷ್ಟ್ರಕರಲ್ಲದಿದ್ದರೆ ಅಥವಾ ಖಾಯಂ ನಿವಾಸಿಗಳಲ್ಲದಿದ್ದರೆ, ಅವರು ಹೊಂದಿರುವ ಉದ್ಯೋಗದ ಕಾರಣದಿಂದ ಅವರು ಪಡೆಯುವ ಉಪಲಬ್ಧಿಗಳ ಮೇಲಿನ ಶುಲ್ಕಗಳಿಂದ ಮತ್ತು ತೆರಿಗೆಗಳಿಂದ ವಿನಾಯಿತಿ ಹೊಂದಿರತಕ್ಕದ್ದು. ಇತರ ವಿಷಯಗಳಲ್ಲಿ, ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು ಅನುಮತಿಸುವ ಮಟ್ಟಿಗೆ ಮಾತ್ರವೇ ಅವರು ವಿಶೇಷಾಧಿಕಾರಗಳನ್ನು ಮತ್ತು ವಿಶೇಷ ರಕ್ಷಣೆಗಳನ್ನು ಅನುಭೋಗಿಸಬಹುದು. ಆದಾಗ್ಯೂ, ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು, ನಿಯೋಗದ ಪ್ರಕಾರ್ಯಗಳ ನೆರವೇರಿಕೆಯಲ್ಲಿ ಅನುಚಿತವಾಗಿ ಹಸ್ತಕ್ಷೇಪವಾಗದಂಥ ರೀತಿಯಲ್ಲಿ ಆ ವ್ಯಕ್ತಿಗಳ ಮೇಲೆ ಅದರ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸತಕ್ಕದ್ದು.

## 38ನೇ ಅನುಚ್ಛೇದ

1. ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು ನೀಡಬಹುದಾದ ಹೆಚ್ಚುವರಿ ವಿಶೇಷಾಧಿಕಾರಗಳ ಮತ್ತು ವಿಶೇಷ ರಕ್ಷಣೆಗಳಷ್ಟರಮಟ್ಟಿಗೆ ಹೊರತು, ಆ ರಾಷ್ಟ್ರದ ರಾಷ್ಟ್ರಕನಲ್ಲದ ಅಥವಾ ಖಾಯಂ ನಿವಾಸಿಯಲ್ಲದ ರಾಜತಾಂತ್ರಿಕ ಏಜೆಂಟನು ಅವನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ನೆರವೇರಿಸಿದ ಅಧಿಕೃತ ಕಾರ್ಯಗಳಿಗೆ ಸಂಬಂಧಪಡುವ ವ್ಯಾಪ್ತಿಯಲ್ಲಿನ ವಿಶೇಷ ರಕ್ಷಣೆಯನ್ನು ಮತ್ತು ಅಲಂಘ್ಯತೆಯನ್ನು ಮಾತ್ರ ಅನುಭೋಗಿಸತಕ್ಕದ್ದು.

2. ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ರಾಷ್ಟ್ರಕರಾಗಿರುವ ಅಥವಾ ಖಾಯಂ ನಿವಾಸಿಗಳಾಗಿರುವ ನಿಯೋಗದ ಸಿಬ್ಬಂದಿ ವರ್ಗದ ಇತರ ಸದಸ್ಯರು ಮತ್ತು ಖಾಸಗಿ ನೌಕರರು ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು ಅನುಮತಿಸುವಷ್ಟರಮಟ್ಟಿಗೆ ಮಾತ್ರ ವಿಶೇಷಾಧಿಕಾರಗಳನ್ನು ಮತ್ತು ವಿಶೇಷ ರಕ್ಷಣೆಗಳನ್ನು ಅನುಭೋಗಿಸತಕ್ಕದ್ದು. ಆದಾಗ್ಯೂ, ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು, ನಿಯೋಗದ ಪ್ರಕಾರ್ಯಗಳ ನೆರವೇರಿಕೆಯಲ್ಲಿ ಅನುಚಿತ ಹಸ್ತಕ್ಷೇಪವಾಗದಂಥ ರೀತಿಯಲ್ಲಿ ಆ ವ್ಯಕ್ತಿಗಳ ಮೇಲೆ ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸತಕ್ಕದ್ದು.

## 39ನೇ ಅನುಚ್ಛೇದ

1. ವಿಶೇಷಾಧಿಕಾರಗಳಿಗೆ ಮತ್ತು ವಿಶೇಷ ರಕ್ಷಣೆಗಳಿಗೆ ಹಕ್ಕುಳ್ಳ ಪ್ರತಿಯೊಬ್ಬ ವ್ಯಕ್ತಿಯು, ತನ್ನ ಹುದ್ದೆಯನ್ನು ವಹಿಸಿಕೊಳ್ಳುವುದಕ್ಕಾಗಿ ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ರಾಜ್ಯಕ್ಷೇತ್ರದಲ್ಲಿ ಪ್ರವೇಶಿಸಿದ ಕ್ಷಣದಿಂದಲೇ ಅಥವಾ ಈಗಾಗಲೇ ಅದರ ರಾಜ್ಯಕ್ಷೇತ್ರದಲ್ಲಿದ್ದರೆ, ಅವನ ನೇಮಕಾತಿಯನ್ನು ವಿದೇಶಾಂಗ ವ್ಯವಹಾರಗಳ ಮಂತ್ರಾಲಯಕ್ಕೆ ಅಥವಾ ಒಪ್ಪಿಕೊಳ್ಳಬಹುದಾದಂಥ ಇತರ ಮಂತ್ರಾಲಯಕ್ಕೆ ಅಧಿಸೂಚಿಸಿದ ಕ್ಷಣದಿಂದಲೇ, ಅವುಗಳನ್ನು ಅನುಭೋಗಿಸತಕ್ಕದ್ದು.

2. ವಿಶೇಷಾಧಿಕಾರಗಳನ್ನು ಮತ್ತು ವಿಶೇಷ ರಕ್ಷಣೆಗಳನ್ನು ಅನುಭೋಗಿಸುತ್ತಿರುವ ವ್ಯಕ್ತಿಯ ಪ್ರಕಾರ್ಯಗಳು ಕೊನೆಗೊಂಡಾಗ, ಅಂಥ ವಿಶೇಷಾಧಿಕಾರಗಳು ಮತ್ತು ವಿಶೇಷ ರಕ್ಷಣೆಗಳು ಅವನು ದೇಶವನ್ನು ಬಿಟ್ಟುಹೋಗುವ ಕ್ಷಣದಲ್ಲಿ ಅಥವಾ ಹಾಗೆ ನೀಡಬಹುದಾದ ಯುಕ್ತ ಅವಧಿಯು ಮುಕ್ತಾಯವಾದ ಕ್ಷಣದಿಂದಲೇ ಸಾಮಾನ್ಯವಾಗಿ ನಿಂತುಹೋಗತಕ್ಕದ್ದು. ಆದರೆ, ಸಶಸ್ತ್ರ ಘರ್ಷಣೆಯ ಸಂದರ್ಭದಲ್ಲಿ ಸಹ, ಆ ಅವಧಿಯವರೆಗೆ ಅಸ್ತಿತ್ವದಲ್ಲಿರತಕ್ಕದ್ದು. ಆದಾಗ್ಯೂ, ಅಂಥ ವ್ಯಕ್ತಿಯು

ನಿಯೋಗದ ಸದಸ್ಯನಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ನೆರವೇರಿಸಿದ ಕಾರ್ಯಗಳಿಗೆ ಸಂಬಂಧಿಸಿದಂತೆ ವಿಶೇಷ ರಕ್ಷಣೆಯ ಅಸ್ತಿತ್ವವು ಮುಂದುವರಿಯತಕ್ಕದ್ದು.

3. ನಿಯೋಗದ ಸದಸ್ಯನು ಮರಣಹೊಂದಿದ ಸಂದರ್ಭದಲ್ಲಿ, ಅವನ ಕುಟುಂಬದ ಸದಸ್ಯರು, ಯಾವ ವಿಶೇಷಾಧಿಕಾರಗಳಿಗೆ ಮತ್ತು ವಿಶೇಷ ರಕ್ಷಣೆಗಳಿಗೆ ಹಕ್ಕು ಹೊಂದಿರುವರೋ ಅವುಗಳನ್ನು, ದೇಶವನ್ನು ಬಿಟ್ಟು ಹೋಗುವುದಕ್ಕಾಗಿ ಇರುವ ಯುಕ್ತ ಅವಧಿಯು ಮುಕ್ತಾಯವಾಗುವವರೆಗೆ ಅನುಭೋಗಿಸುವುದು ಮುಂದುವರಿಯತಕ್ಕದ್ದು.

4. ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದ ರಾಷ್ಟ್ರಕನಲ್ಲದ ಅಥವಾ ಖಾಯಂ ನಿವಾಸಿಯಲ್ಲದ ನಿಯೋಗದ ಸದಸ್ಯನು ಅಥವಾ ಅವನ ಕುಟುಂಬದ ಭಾಗವಾಗಿರುವ ಯಾರೇ ಸದಸ್ಯನು ಮರಣಹೊಂದಿದ ಸಂದರ್ಭದಲ್ಲಿ, ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು, ಮೃತ ವ್ಯಕ್ತಿಯು ಆ ದೇಶದಲ್ಲಿ ಆರ್ಜಿಸಿದ್ದ ಎಲ್ಲ ಚರಸ್ವತ್ತನ್ನು ತೆಗೆದುಕೊಂಡು ಹೋಗಲು ಅನುಮತಿ ನೀಡತಕ್ಕದ್ದು. ಆದರೆ, ಅವನ ಮರಣದ ಸಮಯದಲ್ಲಿ ಯಾವ ಸ್ವತ್ತಿನ ರಫ್ತನ್ನು ನಿಷೇಧಿಸಲಾಗಿತ್ತೋ ಆ ಯಾವುದೇ ಸ್ವತ್ತನ್ನು ತೆಗೆದುಕೊಂಡು ಹೋಗಲು ಅನುಮತಿ ನೀಡತಕ್ಕದ್ದಲ್ಲ. ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರದಲ್ಲಿ ಯಾವ ಚರಸ್ವತ್ತು ಮೃತನು ನಿಯೋಗದ ಸದಸ್ಯನಾಗಿ ಅಥವಾ ನಿಯೋಗದ ಸದಸ್ಯನ ಕುಟುಂಬದ ಸದಸ್ಯನಾಗಿ ಅಲ್ಲಿ ಇದ್ದ ಕಾರಣ ಮಾತ್ರದಿಂದಲೇ ಇದ್ದಿತೋ ಆ ಚರಸ್ವತ್ತಿನ ಮೇಲೆ ಸಂಪದ, ಉತ್ತರಾಧಿಕಾರ ಮತ್ತು ವಾರಸುದಾರಿಕೆ ಶುಲ್ಕಗಳನ್ನು ವಿಧಿಸತಕ್ಕದ್ದಲ್ಲ.

## 40ನೇ ಅನುಚ್ಛೇದ

1. ಒಬ್ಬ ರಾಜತಾಂತ್ರಿಕ ಏಜೆಂಟನು, ತನ್ನ ಹುದ್ದೆಯನ್ನು ವಹಿಸಿಕೊಳ್ಳಲು ಅಥವಾ ಆ ಹುದ್ದೆಗೆ ವಾಪಸ್ಸಾಗಲು ಹೊರಟಿರುವಾಗ ಅಥವಾ ತನ್ನ ಸ್ವಂತ ದೇಶಕ್ಕೆ ಹಿಂತಿರುಗುವಾಗ, ಅವನಿಗೆ ಪಾಸ್‌ಪೋರ್ಟ್, ವೀಸಾ ಅವಶ್ಯವಾಗಿದ್ದರೆ, ಅಂಥ ವೀಸಾವನ್ನು ನೀಡಿರುವ ತೃತೀಯ ರಾಷ್ಟ್ರದ ಮೂಲಕ ಹಾದುಹೋಗುತ್ತಿರುವಾಗ ಅಥವಾ ಅದರ ರಾಜ್ಯಕ್ಷೇತ್ರದಲ್ಲಿ ಇರುವಾಗ ಆ ತೃತೀಯ ರಾಷ್ಟ್ರವು ಅವನ ಪ್ರಯಾಣ ಅಥವಾ ಹಿಂತಿರುಗುವಿಕೆಯನ್ನು ಸುನಿಶ್ಚಿತಗೊಳಿಸಲು ಅಗತ್ಯವಿರಬಹುದಾದಂಥ ಅನುಕೂಲತೆಗಳನ್ನು ಮತ್ತು ಇತರ ವಿಶೇಷ ರಕ್ಷಣೆಗಳನ್ನು ಅವನಿಗೆ ಒದಗಿಸತಕ್ಕದ್ದು. ಅದೇ ರೀತಿಯ ಅನುಕೂಲತೆಗಳನ್ನು ಮತ್ತು ಇತರ ವಿಶೇಷ ರಕ್ಷಣೆಗಳನ್ನು ರಾಜತಾಂತ್ರಿಕ ಏಜೆಂಟನ ಜೊತೆಗೆ ಹೋಗುತ್ತಿರುವ ಅಥವಾ ಅವನನ್ನು ಸೇರಲು ಅಥವಾ ತನ್ನ ದೇಶಕ್ಕೆ ಮರಳಲು ಪ್ರತ್ಯೇಕವಾಗಿ ಪ್ರಯಾಣಿಸುತ್ತಿರುವ ಮತ್ತು ವಿಶೇಷಾಧಿಕಾರಗಳನ್ನು ಮತ್ತು ವಿಶೇಷ ರಕ್ಷಣೆಗಳನ್ನು ಅನುಭೋಗಿಸುತ್ತಿರುವ ಅವನ ಕುಟುಂಬದ ಯಾರೇ ಇತರ ಸದಸ್ಯರಿಗೂ ಸಹ ಒದಗಿಸತಕ್ಕದ್ದು.

2. ಈ ಅನುಚ್ಛೇದದ 1ನೇ ಪ್ಯಾರಾದಲ್ಲಿ ನಿರ್ದಿಷ್ಟಪಡಿಸಿರುವಂಥವೇ ಸಂದರ್ಭಗಳಲ್ಲಿ, ನಿಯೋಗದ ಆಡಳಿತ ಮತ್ತು ತಾಂತ್ರಿಕ ಅಥವಾ ಸೇವಾ ಸಿಬ್ಬಂದಿ ವರ್ಗದ ಸದಸ್ಯರು ಮತ್ತು ಅವರ ಕುಟುಂಬಗಳ ಸದಸ್ಯರು ತೃತೀಯ ರಾಷ್ಟ್ರಗಳ ರಾಜ್ಯಕ್ಷೇತ್ರಗಳ ಮೂಲಕ ಪ್ರಯಾಣ ಮಾಡುವಾಗ ಆ ರಾಷ್ಟ್ರಗಳು ಅವರಿಗೆ ಅಡ್ಡಿಯನ್ನುಂಟು ಮಾಡತಕ್ಕದ್ದಲ್ಲ.

3. ಗೂಢಲೇಖ ಅಥವಾ ಗುಪ್ತಲಿಪಿಯಲ್ಲಿರುವ ಸಂದೇಶಗಳೂ ಸೇರಿದಂತೆ ಸಾಗಣೆಯಲ್ಲಿರುವ ಅಧಿಕೃತ ಪತ್ರ ವ್ಯವಹಾರಕ್ಕೆ ಮತ್ತು ಇತರ ಅಧಿಕೃತ ಸಂಪರ್ಕಗಳಿಗೆ ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು ನೀಡಿರುವಂಥದೇ ಸ್ವಾತಂತ್ರ್ಯ ಮತ್ತು ರಕ್ಷಣೆಯನ್ನು ತೃತೀಯ ರಾಷ್ಟ್ರಗಳು ನೀಡತಕ್ಕದ್ದು. ಯಾರಿಗೆ ಪಾಸ್‌ಪೋರ್ಟನ್ನು, ವೀಸಾ ಅವಶ್ಯವಿದ್ದಲ್ಲಿ ಅಂಥ

ವೀಸಾವನ್ನು ನೀಡಲಾಗಿದೆಯೋ ಆ ರಾಜತಾಂತ್ರಿಕ ಪತ್ರ ವಾಹಕರಿಗೆ ಮತ್ತು ಸಾಗಣೆಯಲ್ಲಿರುವ ರಾಜತಾಂತ್ರಿಕ ಚೀಲಗಳಿಗೆ ನಿಯೋಗವನ್ನು ಬರಮಾಡಿಕೊಳ್ಳುವ ರಾಷ್ಟ್ರವು ಯಾವ ಅನುಕೂಲತೆಗಳನ್ನು ಮತ್ತು ರಕ್ಷಣೆಯನ್ನು ಒದಗಿಸಲು ಬದ್ಧವಾಗಿದೆಯೋ ಅವುಗಳನ್ನೇ ಒದಗಿಸತಕ್ಕದ್ದು.

4. ಈ ಅನುಚ್ಛೇದದ 1ನೇ, 2ನೇ ಮತ್ತು 3ನೇ ಪ್ಯಾರಾಗಳ ಮೇರೆಗೆ ತೃತೀಯ ರಾಷ್ಟ್ರಗಳ ಹೊಣೆಗಾರಿಕೆಗಳು ಆ ಪ್ಯಾರಾಗಳಲ್ಲಿ ಅನುಕ್ರಮವಾಗಿ ನಮೂದಿಸಲಾದ ವ್ಯಕ್ತಿಗಳಿಗೆ ಮತ್ತು ಅನಿವಾರ್ಯ ನಿರ್ಬಂಧಗಳ ಕಾರಣದಿಂದಾಗಿ ತೃತೀಯ ರಾಷ್ಟ್ರದ ರಾಜ್ಯಕ್ಷೇತ್ರದಲ್ಲಿ ಇರಬೇಕಾದಂಥ ಅಧಿಕೃತ ಸಂಪರ್ಕಗಳಿಗೆ ಮತ್ತು ರಾಜತಾಂತ್ರಿಕ ಚೀಲಗಳಿಗೆ ಸಹ ಅನ್ವಯವಾಗತಕ್ಕದ್ದು.

*    *    *